ಯಾವನಾದರೂ ಒಬ್ಬ ಸುಲ್ತಾನನನ್ನು ತಂದರೂ ಸಾಕು. ಹೀಗೆ ಹಲವು ಉಪನಿಷತ್ತುಗಳನ್ನು ತಯಾರು ಮಾಡಿರುವರು. ಈಗಲೂ ಕೂಡ ತಯಾರು ಮಾಡುತ್ತಿರುವರು."

ಈ ಸಾಂಪ್ರದಾಯಿಕ ಶೈಲಿಯಿಂದ ಬಿಡಿಸಿಕೊಂಡು ತಾವು ಬೆಳೆದುದು ಹೇಗೆ ಎಂಬುದನ್ನು ಕುರಿತು ಅವರು ಹೇಳುವುದು ಹೀಗೆ: "ಪಾರಂಪರಿಕ ಸಂಸ್ಕೃತ ಭಾಷೆಯಲ್ಲಿ ಒಂದು ಪದದ ಮೇಲೆ ಎಷ್ಟು ವರ್ಷಗಳಾದರೂ ಚರ್ಚೆ ಮಾಡಬಹುದು. ಪಂಡಿತರಿಗೆ ಮನಸ್ಸು ಬಂದರೆ ಯಾವ ಹರಟೆಯನ್ನಾದರೂ ತೆಗೆದುಕೊಂಡು ವಾದ ಮತ್ತು ಉದಾಹರಣೆ ಮೂಲಕ ಅದು ನ್ಯಾಯಬದ್ಧ ಸಂಸ್ಕೃತವೆಂದು ತೋರಬಲ್ಲರು. ಉಪನಿಷತ್ತುಗಳನ್ನು ತಿಳಿದುಕೊಳ್ಳುವದಕ್ಕೂ ಇರುವ ತೊಡಕುಗಳು ಇವೇ. ಏಕಕಾಲದಲ್ಲಿ ಪರಮ ದ್ವೈತಿಯಾಗಿಯೂ, ಅದ್ವೈತಿಯಾಗಿಯೂ, ಭಕ್ತನಾಗಿಯೂ, ಜ್ಞಾನಿಯಾಗಿಯೂ ಇದ್ದ, ಒಬ್ಬರೊಂದಿಗೆ ಇರುವ ಭಾಗ್ಯ ನನ್ನದಾಗಿತ್ತು. ಇವರ ಬಳಿ ಇರುವಾಗ ಉಪನಿಷತ್ ಮತ್ತು ಇತರ ಶಾಸ್ತ್ರಗಳನ್ನು ಕೇವಲ ಭಾಷ್ಯಕಾರರನ್ನು ಸುಮ್ಮನೆ ಅನುಸರಿಸದೆ ಸ್ವತಂತ್ರವಾಗಿ ಬೇರೊಂದು ದೃಷ್ಟಿಯಿಂದ ಅದನ್ನು ನೋಡಬೇಕು ಎನ್ನಿಸಿತು. ಹಾಗೆ ಮಾಡಲು ಪ್ರಯತ್ನಿಸಿದೆ."

ಸ್ವಾಮೀಜಿ ತಮ್ಮ ಭಾಷಣ, ಲೇಖನ, ಸಂವಾದಗಳಲ್ಲಿ ಗೀತೆ, ಉಪನಿಷತ್ತು, ವೇದ, ಪುರಾಣ, ಶಾಸ್ತ್ರಗಳಿಂದ ಸರಾಗವಾಗಿ ವಾಕ್ಯಗಳನ್ನು ಉದ್ಧರಿಸಿ ವಿವರಿಸಿ, ಶ್ರೋತೃಗಳಿಗೆ, ಓದುಗರಿಗೆ ಮನದಟ್ಟು ಮಾಡುತ್ತಿದ್ದರು. ಇಲ್ಲೆಲ್ಲ ಅವರ ಸಂಸ್ಕೃತ ಪಾಂಡಿತ್ಯ, ಕೇವಲ ಭೂತಕಾಲದ ನೆನಪು ಮತ್ತು ವೈಭವೀಕರಣವಾಗದೆ, ವರ್ತಮಾನಕ್ಕೆ ಸಂಗತವಾಗಿ, ಸಮಾಜಮುಖಿಯಾಗಿರುವುದನ್ನು ಕಾಣಬಹುದಾಗಿದೆ. ಉದಾಹರಣೆಗೆ ಸಪ್ತಶತೀ, ಶ್ರೀಸೂಕ್ತ, ದೇವೀಸೂಕ್ತ ಮುಂತಾದವುಗಳನ್ನು ಕಂಠಪಾಠ ಮಾಡಿ ಪಾರಾಯಣ ಮಾಡುವದು ಇಂದಿನವರೆಗೂ ನಡೆದುಕೊಂಡು ಬಂದ ರೂಢಿ. ಸ್ವಾಮೀಜಿಯವರು, ೧೮೯೪, ಮಾರ್ಚ್ ೧೯ ರಂದು ಶಿಕಾಗೋದಿಂದ ಸ್ವಾಮಿ ಬ್ರಹ್ಮಾನಂದರಿಗೆ ಬರೆದ ಒಂದು ಪತ್ರದಲ್ಲಿ, **'ತ್ವಂ ಸ್ತ್ರೀ ತ್ವಂ ಈಶ್ವರಿ, ತ್ವಂ ಹ್ರೀಃ'** – ನೀನೇ ಲಕ್ಷ್ಮಿ, ನೀನೆ ಈಶ್ವರಿ, ನೀನೆ ಲಜ್ಜಾಸ್ವರೂಪಿಣಿ, **'ಯಾ ದೇವಿ ಸರ್ವ ಭೂತೇಷು ಶಕ್ತಿರೂಪೇಣ ಸಂಸ್ಥಿತಾ'** – 'ಯಾವ ದೇವಿಯು ಸರ್ವಭೂತಗಳಲ್ಲಿಯೂ ಶಕ್ತಿರೂಪಿಣಿಯಾಗಿರುವಳೋ' – ಇದೆಲ್ಲ ಇಲ್ಲಿಗೆ ಹೋಲುತ್ತದೆ. ಈ ದೇಶದಲ್ಲಿ ಹಿಮದಷ್ಟು ಬಿಳುಪೂ, ಶುದ್ಧವೂ ಆದ ಸಾವಿರಾರು ಮಂದಿ ನಾರಿಯರು ಇರುವರು. ನಮ್ಮ ಹುಡುಗಿಯರನ್ನು ನೋಡಿ. ಬಾಲ್ಯದಲ್ಲೇ ಮಕ್ಕಳ ತಾಯಿಯರಾಗುವದನ್ನು! ನನಗೆ ಈಗ ಎಲ್ಲ ಹೊಳೆಯುವುದು... ನಾವು ಪಾಪಾಧಮರು. ನಮ್ಮ ಅಧೋಗತಿಗೆ ಕಾರಣ ಸ್ತ್ರೀಯರನ್ನು ತುಚ್ಛವಾದ ಕೀಟಗಳು, ನರಕಕ್ಕೆ ಮಾರ್ಗ ಎಂದು ಹೇಳಿದುದೆ" ಎಂದು ವಿಶ್ಲೇಷಿಸುತ್ತಾರೆ.

ಸ್ವಾಮೀಜಿಯವರ ಸಂಸ್ಕೃತ ವ್ಯಾಕರಣದ ಪಾಂಡಿತ್ಯವನ್ನು ಸೊಗಸಾಗಿ ತೋರಿಸುವ ಒಂದು ನಿದರ್ಶನ ಹೀಗಿದೆ. ಸಂಸ್ಕೃತದಲ್ಲಿ ಮಗಳಿಗೆ **ದುಹಿತಾ** ಎಂದು ಹೆಸರು. ಈ ಪದೋತ್ಪತ್ತಿ ಹೀಗಾಯಿತು. ಹಿಂದಿನ ಕಾಲದಲ್ಲಿ ಮಗಳು ಹಸುವಿನ ಹಾಲನ್ನು ಕರೆಯುವ ವಾಡಿಕೆ ಇತ್ತು. ಇದರಿಂದ ದೋಹ – ಹಾಲುಕರೆ ಎಂಬ ಪದ ಬಂದು ದುಹಿತಾ ಎಂದಾಗಿದೆ. ಮಗಳು ಎನ್ನುವದಕ್ಕೆ ನಿಜವಾದ ಅರ್ಥ ಹಾಲು ಕರೆಯುವವಳು ಎಂದು. ಕಾಲಾನಂತರ ದುಹಿತಾ ಎನ್ನುವದಕ್ಕೆ ಬೇರೆ ಅರ್ಥ ಕಲ್ಪಿಸಿದರು. ಯಾರು ಮನೆಯ ಹಾಲನ್ನೆಲ್ಲ (ಐಶ್ವರ್ಯವನ್ನೆಲ್ಲ) ಕರೆಯುತ್ತಾಳೊ ಅವಳು ಎಂದು! ಇದು ಎರಡನೆಯ ಅರ್ಥ. ಹೀಗೆ ಹಲವು ಪದಗಳ ವಿಶೇಷವಾದ ಅರ್ಥವನ್ನು ವ್ಯುತ್ಪತ್ತಿಶಾಸ್ತ್ರದ ಮೂಲಕ ಸ್ವಾಮೀಜಿ ವಿವರಿಸುತ್ತಿದ್ದರು.

ಸ್ವಾಮಿ ವಿವೇಕಾನಂದರು ಸಾಮಾನ್ಯವಾಗಿ ತಮ್ಮ ಭಾಷಣಗಳನ್ನು ಇಂಗ್ಲಿಷಿನಲ್ಲಿ ಅಥವಾ ಸಂಸ್ಕೃತದಲ್ಲಿ ಮಾಡುತ್ತಿದ್ದರೆಂದು ತಿಳಿದು ಬರುತ್ತದೆ. ೧೮೯೨ ರಲ್ಲಿ ಅವರು ಮೈಸೂರಿಗೆ ಬಂದಾಗ ದಿವಾನ್ ಶೇಷಾದ್ರಿ ಅಯ್ಯರ್ ಅವರ ನಿವಾಸದಲ್ಲಿ ಮೂರು ವಾರಗಳ ಕಾಲ ಉಳಿದುಕೊಂಡರು. ಆ ಸಮಯದಲ್ಲಿ ಸದ್ವಿದ್ಯಾ ಪಾಠಶಾಲೆಯಲ್ಲಿ ವೇದಾಂತ ಮತ್ತು ಧಾರ್ಮಿಕ ಉಪನ್ಯಾಸಗಳನ್ನು ಪ್ರತಿದಿನವೂ ನೀಡುತ್ತಿದ್ದರು. ಈ ಪ್ರವಚನಗಳು ಸಂಸ್ಕೃತಭಾಷೆಯಲ್ಲಿ ಇದ್ದು, ಅದನ್ನು ಅಂಬಳೆ ಅಣ್ಣಯ್ಯ ಪಂಡಿತರು ಕನ್ನಡಕ್ಕೆ ಅನುವಾದ ಮಾಡುತ್ತಿದ್ದರೆಂದು, ತಾತಯ್ಯನವರು (ಶ್ರೀ ವೆಂಕಟಕೃಷ್ಣಯ್ಯ) ತಮ್ಮ ಒಂದು ಕೃತಿಯಲ್ಲಿ ದಾಖಲಿಸಿದ್ದಾರೆ.

ವಿವೇಕಾನಂದರ ವೇದಾಂತದ ಭಾಷಣ ಎಂದೂ ಶುಷ್ಕವಾಗಿರುತ್ತಿರಲಿಲ್ಲ. ಆತ್ಮತತ್ತ್ವದ ವರ್ಣನೆಯನ್ನು ವಿವರಿಸುವಾಗ ವೇದ, ಉಪನಿಷತ್ತು, ಗೀತೆಯ ವಚನಗಳನ್ನು ಉದ್ಧರಿಸುವುದರೊಂದಿಗೆ, ಅಲ್ಲಿನ ಕಾವ್ಯಸೌಂದರ್ಯವನ್ನು ಕಾವ್ಯಮೀಮಾಂಸಕರಿಗಿಂತ ಮಿಗಿಲಾಗಿ ತೋರಿಸುತ್ತಿದ್ದರು. **'ನ ತತ್ರ ಸೂರ್ಯೋ ಭಾತಿ'** ಎಂಬ ಮಂತ್ರವನ್ನು ಉದಹರಿಸಿ ಸ್ವಾಮೀಜಿ ಹೀಗೆ ಹೇಳುತ್ತಾರೆ: "ಪೃಥ್ವಿಯಲ್ಲಿ ಯಾವ ಕಾವ್ಯ ಇದಕ್ಕಿಂತ ಸುಂದರವಾಗಬಲ್ಲದು? ಇಂತಹ ಕಾವ್ಯ ಪ್ರಪಂಚದಲ್ಲಿ ಮತ್ತೆಲ್ಲಿಯೂ ದೊರಕದು. ಅಪೂರ್ವವಾದ ಕಠೋಪನಿಷತ್ತನ್ನೇ ತೆಗೆದುಕೊಳ್ಳಿ. ಕಾವ್ಯರಚನೆಯ ಚಮತ್ಕಾರ ಎಷ್ಟು ಸುಂದರವಾಗಿದೆ ನೋಡಿ! ಎಷ್ಟು ಮನೋಹರ ರೀತಿಯಲ್ಲಿ ಕಾವ್ಯವನ್ನು ಆರಂಭ ಮಾಡಿರುವರು ನೋಡಿ. ಆ ಸಣ್ಣ ಬಾಲಕ ನಚಿಕೇತನ ಹೃದಯದಲ್ಲಿ ಶ್ರದ್ಧೆ ಬಂದು ಯಮನ ದರ್ಶನಕ್ಕೆ ಹೋಗುವನು. ಸ್ವಯಂ ಯಮನೇ ಅತಿ ಕುಶಲಿಯಾದ ಗುರು. ಅವನೇ ಜನನ ಮರಣಗಳ ರಹಸ್ಯವನ್ನು ವಿವರಿಸುವನು. ಆ ಹುಡುಗನ ಅನ್ವೇಷಣೆ ಏನು? ಮೃತ್ಯುರಹಸ್ಯವನ್ನು ಅರಿಯುವುದು."

ಹಾಗೆಯೇ ಇನ್ನೊಂದೆಡೆ ೧೮೯೭ ರಲ್ಲಿ ಕಾಶೀಪುರಕ್ಕೆ ಹೋಗುವಾಗ ಶಿಷ್ಯರೊಂದಿಗೆ ಸಂಭಾಷಣೆ ನಡೆಸುತ್ತ, "ಜಯದೇವನೇ ಸಂಸ್ಕೃತ ಭಾಷೆಯ ಕೊನೆಯ ಕವಿ, ಆದರೆ ಜಯದೇವನು ಅನೇಕ ಸ್ಥಳಗಳಲ್ಲಿ ಭಾವಕ್ಕಿಂತಲೂ ಕಿವಿಗೆ ಇಂಪಾದ ವಾಕ್ಯವಿನ್ಯಾಸಗಳ ಕಡೆಗೇ ಹೆಚ್ಚು ಲಕ್ಷ್ಯವನ್ನು ಕೊಟ್ಟಿದ್ದಾನೆ. ಗೀತ ಗೋವಿಂದದ 'ಪತತಿ ಪತತ್ರೇ . .' ಎಂಬ ಗಾನದಲ್ಲಿ ಅನುರಾಗ ಮತ್ತು ವ್ಯಾಕುಲತೆಯ ಎಂಥ ಪರಾಕಾಷ್ಠೆಯನ್ನು ಕವಿ ತೋರಿಸುತ್ತಾನೆ, ನೋಡಿದೆಯಾ? ಆತ್ಮದರ್ಶನಕ್ಕೋಸ್ಕರ ಈ ವಿಧವಾದ ಅನುರಾಗ ಉಂಟಾಗಬೇಕು. ಜೀವನದಲ್ಲಿ ವಿಲವಿಲನೆ ಒದ್ದಾಟ ಉಂಟಾಗಬೇಕು" ಎಂದು ಆತ್ಮದರ್ಶನಕ್ಕಿರುವ ತುಡಿತವನ್ನು ಸ್ವಾಮೀಜಿ ವರ್ಣಿಸುತ್ತಾರೆ.

ಸ್ವಾಮಿ ವಿವೇಕಾನಂದರು ತಾವು ಸಂಸ್ಕೃತ ಪಂಡಿತರಾಗಿದ್ದುದಲ್ಲದೆ ಆ ಭಾಷೆಯಲ್ಲಿದ್ದ ಅಮೂಲ್ಯವಾದ ಜ್ಞಾನಾಮೃತವನ್ನು ಜಗತ್ತಿನೆಲ್ಲೆಡೆಯ ಆಸಕ್ತರಿಗೆ ಉಣಬಡಿಸಿದರು. ಪ್ರಾಚೀನ ಋಷಿ–ಮುನಿಗಳು, ಆಚಾರ್ಯರು ಕಂಡ ಜ್ಞಾನನಿಧಿಯನ್ನು ತೆರೆದು ಜಗತ್ತಿಗೆ ತೋರಿಸಿದರು. ಕೆಲವೇ ಕೆಲವರ ಸ್ವತ್ತಾಗಿದ್ದ ಅರಿವನ್ನು ಸಾಮಾನ್ಯರಿಗೂ ಪ್ರಚುರಪಡಿಸಿದರು. ಸ್ವಾಮೀಜಿಯವರು ಈ ಕೆಲಸ ಮಾಡದಿದ್ದರೆ, ಈ ದೇಶದ ದರ್ಶನಗಳು ಮೂಲೆಗುಂಪಾಗಿ ಬಿದ್ದಿರುತ್ತಿದ್ದವೇನೋ. ಇಂದಿಗೂ ನಮ್ಮ ದೇಶದಲ್ಲಿ ಸಂಸ್ಕೃತ ವ್ಯಾಸಂಗ ನಡೆಯುತ್ತಿರುವುದು ಹೆಚ್ಚಾಗಿ ಭಾಷೆಯ ಉಳಿವಿಗಾಗಿ, ಇನ್ನು ಕೆಲವರು ಹೇಳುವಂತೆ ಸಂಸ್ಕೃತಿಯ ಮತ, ಧರ್ಮದ ಉಳಿವಿಗಾಗಿ. ಈ ಸೀಮಿತ ಉದ್ದೇಶದ ಫಲವಾಗಿ ನಮ್ಮಲ್ಲಿರುವ ಅಮೂಲ್ಯ ಜ್ಞಾನನಿಧಿಗಳು ಸಂಸ್ಕೃತವೆಂಬ ಕಬ್ಬಿಣದ ಪೆಠಾರಿಯಲ್ಲಿ ಭದ್ರವಾಗಿ ಕುಳಿತಿವೆ. ಇದನ್ನು ಮನಗಂಡ ವಿವೇಕಾನಂದರು ಸಂಸ್ಕೃತ ಕಲಿಕೆಯ ಉದ್ದೇಶವನ್ನು ಹೀಗೆ ಸ್ಪಷ್ಟಪಡಿಸಿದ್ದಾರೆ: "ಸಂಸ್ಕೃತ ಭಾಷೆಯೇ ಕಷ್ಟ. ಇದು ವೇದದ ಭಾಷೆ. ಸಂಸ್ಕೃತವು ತತ್ತ್ವಶಾಸ್ತ್ರದಷ್ಟೇ ಪ್ರೌಢವಾಗಿದೆ. ನಮ್ಮ ಶಾಸ್ತ್ರಗಳಲ್ಲಿರುವ, ಮಠ ಮತ್ತು ಅರಣ್ಯಗಳಲ್ಲಿ ಎಲ್ಲೋ ಕೆಲವರಿಗೆ ಮಾತ್ರ ಗೊತ್ತಿರುವ ಆಧ್ಯಾತ್ಮಿಕ ರತ್ನವನ್ನು ಬಯಲಿಗೆ ತರಬೇಕು. ಎಲ್ಲಿ ಅದು ರಹಸ್ಯವಾಗಿರುವುದೋ ಅಂತಹ ಕೆಲವು ವ್ಯಕ್ತಿಗಳಿಂದ ಹೊರಗೆ ತರುವುದು ಮಾತ್ರವಲ್ಲ, ದುರ್ಭೇದ್ಯವಾದ ಯಾವ ಭಾಷಾ ಪೆಟ್ಟಿಗೆಯಲ್ಲಿ ಅದು ಸುರಕ್ಷಿತವಾಗಿದೆಯೋ ಅಂತಹ ಶಬ್ದ ಜಾಲದಿಂದ ಇದನ್ನು ಬಿಡಿಸಬೇಕಾಗಿದೆ. ಇದನ್ನು ಜನರಿಗೆ ಸುಲಭ ಮಾಡಬೇಕು. ಈ ತತ್ತ್ವಗಳನ್ನು ಹೊರಗೆ ತರಬೇಕು. ಭಾರತದ ಪ್ರತಿಯೊಬ್ಬ ವ್ಯಕ್ತಿಯ ಸರ್ವಸಾಮಾನ್ಯ ಸಂಪತ್ತು ಇದಾಗಬೇಕು. ಅವನಿಗೆ ಸಂಸ್ಕೃತ ಗೊತ್ತಿರಲಿ, ಇಲ್ಲದಿರಲಿ ಚಿಂತೆಯಿಲ್ಲ. ಈ ಮಾರ್ಗದಲ್ಲಿರುವ ಮೊದಲನೆ ಅಡ್ಡಿ ಪ್ರಖ್ಯಾತವಾದ ನಮ್ಮ ಸಂಸ್ಕೃತ ಭಾಷೆ. ನಮ್ಮ ದೇಶದವರೆಲ್ಲರೂ ಸಂಸ್ಕೃತ ವಿದ್ಯಾವಂತರಾಗುವವರೆಗೆ ಈ ಅಡಚಣೆಯನ್ನು ನಿವಾರಿಸಲು ಕಷ್ಟ. ನಾನು ಇಡೀ ಜೀವನವನ್ನೆಲ್ಲ ಈ ಭಾಷೆಯನ್ನು ಅಭ್ಯಸಿಸುತ್ತಿರುವೆನು. ಆದರೂ ಪ್ರತಿಯೊಂದು ಹಳೇ ಗ್ರಂಥವೂ ನನಗೆ ಹೊಸದಾಗಿದೆ ಎಂದರೆ ಅದರ ಕಷ್ಟ ನಿಮಗೆ ಅರಿವಾಗುವದು. ಈ ಭಾಷೆಯನ್ನು ವಿವರವಾಗಿ ಅಭ್ಯಾಸ ಮಾಡುವುದಕ್ಕೆ ಸಮಯವಿಲ್ಲದವರಿಗೆ ಕಷ್ಟ ಎಷ್ಟಿರಬಹುದು! ಆದಕಾರಣವೇ ದೇಶಭಾಷೆಯ ಮೂಲಕ ಜನರಿಗೆ ಪ್ರಚಾರ ಮಾಡಬೇಕು. ಜೊತೆಗೆ ಸಂಸ್ಕೃತ ವಿದ್ಯಾಭ್ಯಾಸವೂ ನಡೆಯಬೇಕು."

ವಿದ್ಯಾಭ್ಯಾಸದ ಬಗ್ಗೆ ಸ್ವಾಮೀಜಿ ಹೀಗೆ ಹೇಳುತ್ತಿದ್ದರು: "ನಿಜವಾದ ವಿದ್ಯಾಭ್ಯಾಸವೆಂದರೇನು? ಅದೇನು ಪುಸ್ತಕ ಪಾಂಡಿತ್ಯವೇ? ಅಲ್ಲ. ಅದೇನು ಹಲವು ವಿಷಯಗಳನ್ನು ತಿಳಿದುಕೊಂಡಿರುವುದೇ? ಅದೂ ಅಲ್ಲ.... ಗಂಧದ ತುಂಡುಗಳನ್ನು ಹೊರುವ ಕತ್ತೆಗೆ ಅದರ ಭಾರ ಮಾತ್ರ ಗೊತ್ತು. ಅದರ ಬೆಲೆ ಗೊತ್ತಿಲ್ಲ. ವಿಷಯ ಸಂಗ್ರಹವೇ ವಿದ್ಯಾಭ್ಯಾಸವಾದರೆ ಪ್ರಪಂಚದಲ್ಲಿ ಪುಸ್ತಕಾಲಯಗಳೇ ಮಹಾಮುನಿಗಳಾಗುತ್ತಿದ್ದವು. ವಿಶ್ವಕೋಶಗಳೇ ಮಹಾಋಷಿಗಳಾಗುತ್ತಿದ್ದವು." ಹೀಗೆ ಹೇಳುವುದರ ಮೂಲಕ, ಮಾಹಿತಿಸಂಗ್ರಹವೇ ವಿದ್ಯಾಭ್ಯಾಸದ ಪರಮಗುರಿ ಎಂದು ತಪ್ಪು ತಿಳಿದುಕೊಳ್ಳುವ ಈ ಆಧುನಿಕ ಕಾಲಕ್ಕೆ ಯೋಗ್ಯವಾದ ದಿಕ್ಸೂಚಿಯನ್ನೂ, ಮಾರ್ಗದರ್ಶನವನ್ನೂ ಸ್ವಾಮೀಜಿ ನೀಡಿದ್ದಾರೆ.

ಇದೇ ಮಾತನ್ನು ಶ್ರೀ ರಾಮಕೃಷ್ಣರೂ ತಮ್ಮ ಉಪದೇಶಾಮೃತದಲ್ಲಿ ಹೀಗೆ ಹೇಳುತ್ತಾರೆ. "ಸುಮ್ಮನೇ ಪಾಂಡಿತ್ಯದಿಂದ ಏನು ಪ್ರಯೋಜನ? ಪಂಡಿತರಿಗೆ ಬೇಕಾದಷ್ಟು ಶಾಸ್ತ್ರ ಗೊತ್ತಿರಬಹುದು. ಶ್ಲೋಕಗಳು ಬಾಯಿಗೆ ಬರಬಹುದು. ಅವುಗಳನ್ನು ಹೇಳಿದುದರಿಂದ ಪ್ರಯೋಜನವೇನು? ಶಾಸ್ತ್ರದಲ್ಲಿರುವ ಸತ್ಯಗಳನ್ನು ಒಬ್ಬನು ತನ್ನ ಜೀವಮಾನದಲ್ಲಿ ಸಾಕ್ಷಾತ್ಕಾರ ಮಾಡಿಕೊಳ್ಳಬೇಕು. ಇದುವೇ ಪಾಂಡಿತ್ಯದ ಫಲ." ಅಂತಹ ಮಹಾನ್ ಪಂಡಿತರು, ಮಹಾನ್ ದಾರ್ಶನಿಕರು ಸ್ವಾಮಿ ವಿವೇಕಾನಂದರು.

## ಮರೆಯಲಾಗದ "ಯಾರಿವನು?"

**೧೯೬೦ನೆಯ ಇಸವಿ. ನಾನಾಗ ಬೆಳಗಾವಿಯ ಬಂಡೋಪಂತ ಕಣಬರ್ಗಿ ಮಾಡೆಲ್ ಹೈಸ್ಕೂಲಿನಲ್ಲಿ ಒಂಬತ್ತನೆಯ ತರಗತಿಯ ವಿದ್ಯಾರ್ಥಿ. ಒಂದು ದಿನ ನಮ್ಮ ಕನ್ನಡ ಮಾಸ್ತರರಾದ ಯರಗುದ್ದಿಯವರು ತಮ್ಮ ಪಾಠದಲ್ಲಿ ಶುದ್ಧಬರಹವನ್ನು ಕಲಿಸುತ್ತಿದ್ದರು. ಪುಸ್ತಕವೊಂದರ ಅಧ್ಯಯನವನ್ನು ಅವರು ಓದುವುದು, ಅದನ್ನೇ ನಾವು ಸುಂದರವಾಗಿ ಬರೆಯುವದು –ಇದು ಕ್ರಮವಾಗಿತ್ತು. ನಮ್ಮ ಮಾಸ್ತರರು ಪಾಠದ ತಲೆಬರಹವನ್ನು ಉಚ್ಚರಿಸಿದರು. – 'ಯಾರಿವನು?' ಆಗ ನನ್ನ ಮೈಯಲ್ಲೆಲ್ಲಾ ರೋಮಾಂಚನವಾಯಿತು. ಉಕ್ತಲೇಖನದ ಈ ವರ್ಗದಲ್ಲಿ ಮಾಸ್ತರರು ತಮ್ಮ ಕಂಚಿನಕಂಠದಲ್ಲಿ ಹೇಳಿದ್ದನ್ನು ನಾವು ಬರೆಯುತ್ತಾ ಹೋದಂತೆಲ್ಲ ಮೈಯೆಲ್ಲ ವಿದ್ಯುತ್ ಕಾಂತಿ ಪಸರಿಸಿದಂತಾಯಿತು. ಹೃದಯ ಭಾವೋದ್ವೇಗದಿಂದ ತುಂಬಿಬಂತು. ನಾವು ಬೆಕ್ಕಸಬೆರಗಾಗಿ ಒಬ್ಬರನ್ನೊಬ್ಬರು ನೋಡುತ್ತ ಕೇಳಿಕೊಂಡೆವು: "ಯಾರಿವನು?"**

**ಕನ್ಯಾಕುಮಾರಿಯ ಆ ವಿಶಾಲ ಸಮುದ್ರದ ಬಂಡೆಯ ಮೇಲೆ ವಿರಾಜಮಾನರಾದ ವೀರ ಸಂನ್ಯಾಸಿ ಸ್ವಾಮಿ ವಿವೇಕಾನಂದರು ವಿಶ್ವಸಮ್ಮೇಳನಕ್ಕೆ ಹೋಗುವ ಪೂರ್ವದಲ್ಲಿ ಭರತಭೂಮಿಯನ್ನು ಉದ್ದೇಶಿಸಿ ಪ್ರಾರ್ಥಿಸಿದ ಸನ್ನಿವೇಶ ಅಧ್ಯಾಯವೇ 'ಯಾರಿವನು?' ನಮ್ಮ ರಾಷ್ಟ್ರಕವಿ ಕುವೆಂಪು ಅತ್ಯಂತ ಸುಂದರ ಭಾಷೆಯಲ್ಲಿ ಕಾವ್ಯಮಯವಾಗಿ ಬರೆದ ಸ್ವಾಮಿ ವಿವೇಕಾನಂದರ ಚರಿತ್ರೆಯ ಮೊದಲ ಅಧ್ಯಾಯವೇ 'ಯಾರಿವನು?' ಗಮನಿಸತಕ್ಕ ಒಂದು ವಿಶೇಷ ಅಂಶವೇನೆಂದರೆ ಈ ಅಧ್ಯಾಯದ ಮೊದಲ ಶಬ್ದದಿಂದ ಹಿಡಿದು ಕೊನೆಯವರೆಗೆ, ಲೇಖಕರು ಎಲ್ಲಿಯೂ ಸ್ವಾಮಿ ವಿವೇಕಾನಂದರ ಹೆಸರನ್ನು ಪ್ರಸ್ತಾಪಿಸಿಲ್ಲ. ಆದರೆ ಅವರ ದಿವ್ಯ ಭವ್ಯ ವ್ಯಕ್ತಿತ್ವದ ಸುಂದರ ಕಾವ್ಯಮಯ ವರ್ಣನೆ ಇಲ್ಲಿದೆ. ನಮ್ಮ ಮಾಸ್ತರರು, "ಈ ಪುಸ್ತಕದ ಭಾಷೆ ಛಲೋ ಅದ. ಲಾಯ್‌ಬ್ರರ್‍ಯಾಗ ತಪ್ಪದೇ ತಗೊಂಡ ಓದರಿ" ಎಂದು ಭಾವುಕರಾಗಿ ಹೇಳಿದರು. ಮರುದಿನ ಅ ಪುಸ್ತಕವನ್ನು ಆದ್ಯಂತವಾಗಿ ಓದಿ ಮುಗಿಸಿದೆ. ಅಂದಿನಿಂದ ನನ್ನ ಜೀವನ ಸಂಪೂರ್ಣ ಬದಲಾಯಿತು. ದಿವ್ಯತ್ರಯರಲ್ಲಿ ಭಕ್ತಿಭಾವ ಮೂಡಿ ನನ್ನ ಕುತೂಹಲ ಬೆಳೆದು ಇತರ ಪುಸ್ತಕಗಳನ್ನೂ ಅಧ್ಯಯನ ಮಾಡಿದೆ. ಸಾಕ್ಷಾತ್ ಪರಬ್ರಹ್ಮಸ್ವರೂಪರಾದ ಭಗವಾನ್ ರಾಮಕೃಷ್ಣ, ಜಗಜ್ಜನನಿ ಶಾರದಾಮಾತೆ ಹಾಗೂ ಸ್ವಾಮಿ ವಿವೇಕಾನಂದರ ಕರುಣೆ ಅಪಾರವಾಗಿದೆ. ಭರತವರ್ಷದ ಉದ್ಧಾರಕ್ಕಾಗಿ ಜನ್ಮವೆತ್ತಿ, ಧರ್ಮಧ್ವಜವನ್ನು ಎತ್ತಿಹಿಡಿದು, ಸಂಸ್ಕೃತಿಯ ಕೀರ್ತಿ ಪತಾಕೆಯನ್ನು ವಿಶ್ವದೆಲ್ಲೆಡೆ ಹಾರಿಸಿದ ಧೀರಸಂನ್ಯಾಸಿ ಸ್ವಾಮಿ ವಿವೇಕಾನಂದರನ್ನು ಪಡೆದ ಭಾರತಭೂಮಿ ಧನ್ಯ ಎನ್ನಿಸಿದೆ. ನನ್ನ ಪಾಲಿಗೆ ಅವರು ಮರೆಯಲಾಗದ 'ಯಾರಿವನು?' ಆಗಿದ್ದಾರೆ. ದಿವ್ಯತ್ರಯರ ಕರುಣೆ ನಮ್ಮನ್ನೆಲ್ಲ ಕೊನೆಯವರೆಗೆ ಕಾಪಾಡಲಿಯೆಂದು ಪ್ರಾರ್ಥಿಸುತ್ತೇನೆ.**

**– ಜೀವಾಜಿ ಜೋಶಿ, ಹುಬ್ಬಳ್ಳಿ – ನವನಗರ**

# ಕನ್ನಡ ಕವಿಗಳು ಕಂಡ ಸ್ವಾಮಿ ವಿವೇಕಾನಂದರ ಚಿತ್ರಣ

ಎಚ್.ಎಸ್.ಲಕ್ಷ್ಮೀನಾರಾಯಣ ಭಟ್ಟ

ಕನ್ನಡ ಸಾಹಿತಿಗಳು, ಅದರಲ್ಲೂ ಕನ್ನಡದ ಮೇರು ಕವಿಗಳು ಸ್ವಾಮಿ ವಿವೇಕಾನಂದರ ಜೀವನ ಮತ್ತು ದರ್ಶನಗಳಿಂದ ತುಂಬ ಪ್ರಭಾವಿತರಾಗಿದ್ದಾರೆ; ಸ್ವಾಮೀಜಿಯವರ ಬಗೆಗಿನ ತಮ್ಮ ಭಾವನೆಗಳನ್ನು ಸಶಕ್ತ ಪದಪುಂಜಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರಲ್ಲಿ ಕೆಲವರ ಕವಿತೆಗಳನ್ನು ಸ್ವಾಮಿ ವಿವೇಕಾನಂದರಿಗೆ ಶ್ರದ್ಧಾಂಜಲಿಯ ರೂಪದಲ್ಲಿ ಸಂಗ್ರಹಿಸಿಕೊಟ್ಟ ಮಾನ್ಯ ಲೇಖಕರು ನಿವೃತ್ತ ಭೌತಶಾಸ್ತ್ರ ಪ್ರಾಧ್ಯಾಪಕರು, ಕನ್ನಡ ಸಾಹಿತ್ಯದ ಪರಿಚಾರಕರು. ೨೦೦೨ರ ಡಿ.ವಿ.ಜಿ. ಪ್ರಶಸ್ತಿ ಪಡೆದ ಇವರು ಮಂಕುತಿಮ್ಮ ಕಗ್ಗದ ಪ್ರಸಾರ ಕಾರ್ಯವನ್ನು ವಿಶೇಷವಾಗಿ ನಡೆಸುತ್ತಿದ್ದಾರೆ.


೨೦೧೩ರ ಜನವರಿ ೧೨ಕ್ಕೆ ವೀರ ಸಂನ್ಯಾಸಿ ವಿವೇಕಾನಂದರು ಜನ್ಮ ತಾಳಿ ೧೫೦ ವರ್ಷ ತುಂಬುತ್ತದೆ. ಕೇವಲ ೩೯ ವರ್ಷಗಳ ಕಾಲವೇ ಶರೀರ ತಳೆದಿದ್ದ ಆ ದಿವ್ಯಾತ್ಮವು ಭಾರತ ಮಾತೆಯ ಕೀರ್ತಿಯನ್ನು ವಿಶ್ವದಾದ್ಯಂತ ಪಸರಿಸುವ ರೀತಿಯಲ್ಲಿ ವಿಕಸನವಾಗಿದೆ, ವಿಸ್ತೃತವಾಗಿದೆ, ವಿರಾಜಮಾನವಾಗಿದೆ. ಭಗವಾನ್ ಶ್ರೀರಾಮಕೃಷ್ಣ ಪರಮಹಂಸರ ದಿವ್ಯ ಸಾನ್ನಿಧ್ಯದಲ್ಲಿ ಮಾತೆ ಶಾರದಾದೇವಿಯವರ ಹೃದಯ ತಾವರೆಯಲ್ಲಿ ಬೆಳೆದು, ಬೆಳಗಿದ, ಮೂಢನಂಬಿಕೆಯ ಅಂಧಕಾರವನ್ನು ದೂರ ಮಾಡಿದ, ನಾಡಿನಾದ್ಯಂತ ಶಕ್ತಿ ಸಂಚಾರ ಮಾಡಿದ, ವೀರ ಸಂನ್ಯಾಸಿ, ವಿಶ್ವಮಾನವ, ವಿಶ್ವವಿಜೇತ ಶ್ರೀ ವಿವೇಕಾನಂದರು ನಮ್ಮೆಲ್ಲರ ಆರಾಧ್ಯ ದೈವ.

ಸ್ವಾಮಿ ವಿವೇಕಾನಂದರ ಜೀವನದ ಘಟನಾವಳಿಗಳ ಬಗ್ಗೆ, ಹಾಗೂ ಅಂದಿನ ಭಾರತದ ಸ್ಥಿತಿಗತಿಗಳ ಬಗ್ಗೆ, ಅನೇಕಾನೇಕ ಭಾಷೆಗಳಲ್ಲಿ, ವಿಶ್ವದಾದ್ಯಂತ ಅನೇಕ ಪುಸ್ತಕಗಳು ಪ್ರಕಟಣೆಗೊಂಡಿವೆ. ವಿವೇಕಾನಂದರ ಪತ್ರಗಳು, ಉಪನ್ಯಾಸಗಳು, ಅದಕ್ಕೆ ಸಂಬಂಧಿಸಿದ ಲೇಖನಗಳು – ಇವೂ ವಿಶ್ವದಾದ್ಯಂತ ವಿವಿಧ ಭಾಷೆಗಳಲ್ಲಿ ರೂಪ ತಾಳಿವೆ; ಲೋಕದ ಜನರ ನೆಮ್ಮದಿಗೆ ಆಧಾರವಾಗಿವೆ. ಇಂತಹ ಕೆಲಸಗಳು ಕನ್ನಡ ಸಾಹಿತ್ಯದಲ್ಲೂ ಸಾಕಷ್ಟು ಸಂಖ್ಯೆಯಲ್ಲಿ ನಡೆದಿವೆ. ಬಂಗಾಳಿ ಮತ್ತು ಇಂಗ್ಲಿಷಿನಲ್ಲಿ ಅನ್ಯಾನ್ಯ ವಿಷಯಗಳ ಬಗ್ಗೆ, ಸ್ವಾಮೀಜಿ ಮಾಡಿರುವ ಉಪನ್ಯಾಸಗಳ, ಪತ್ರಗಳ ಕನ್ನಡ ಅನುವಾದಗಳೂ ಕೃತಿಶ್ರೇಣಿಯ ರೂಪದಲ್ಲಿ ಲಭ್ಯವಿದೆ.

ಪ್ರಸ್ತುತ ಈ ಲೇಖನದಲ್ಲಿ ಇಂತಹ ಗ್ರಂಥಗಳನ್ನು ಪರಿಚಯಿಸುವ ಸಾಹಸವನ್ನು ಮಾಡಿರುವುದಿಲ್ಲ. ಪೂಜ್ಯ ಸ್ವಾಮಿಗಳ ಜೀವನದ ಅದ್ಭುತವಾದ, ರೋಚಕವಾದ, ಸಾಹಸಮಯವಾದ ಹಾಗೂ ಉತ್ತೇಜನಕಾರಿಯಾದ, ಬೆಳಕು ನೆರಳಿನ ತೂಗಾಟದ ಕೆಲವಾರು ಅಂಶಗಳನ್ನು ವಿವಿಧ ಕವನಗಳಲ್ಲಿ ಅನ್ಯಾನ್ಯ ಕವಿಗಳು ಚಿತ್ರಿಸಿರುವುದನ್ನು ಕೆಲವೇ ಪುಟಗಳಲ್ಲಿ ಸಂಗ್ರಹಿಸುವ ಪ್ರಯತ್ನವೇ ಈ ಲೇಖನದ ಗುರಿ.

### ಡಿ.ವಿ.ಜಿ ಅವರ 'ವಿವೇಕಾನಂದ ಸ್ವಾಮಿ' ಕವನದಿಂದ

ಪುಣ್ಯಭೂಮಿಯೆ, ನಿನ್ನ ಪುಣ್ಯಗಂಧವನಖಿಲ
ಭುವನದೊಳ್ ಪಸರಿಸುತ ನಲಿವುದೆಂದು
ಆರ್ಯ ಕುಲಜರೆ, ನಿಮ್ಮ ನಿಜಧರ್ಮದೀಪಮಂ
ಮರಳಿ ಬೆಳಗಿಸಿ ಗುರುತೆವಡೆವುದೆಂದು



ವೇದ ಜನನಿಯೆ, ನಿನ್ನ ದಿವ್ಯಗಾನವ ಕೇಳೆ
ಜಗವೆಲ್ಲ ತಲೆವಾಗಿ ಬರುವುದೆಂದು
ವೇದಾಂತ ಕೇಸರಿಯೆ, ನಿದ್ರೆಯಂ ತೊರೆದು ನೀಂ
ಗುಹೆಯಿಂದ ಪೊರೆಮಟ್ಟು ಮೆರೆವುದೆಂದು

ಇಂತು ನಿಜಜನಪದವನೆಲ್ಲರಂಗೊಳಿಸುತನಿಶಂ
ಭರತಮಾತೆಯ ಜೈತ್ರಯಾತ್ರೆಯೊಳ್ ಪ್ರಮುಖನೆನಿಸಿ
ವಿಬುಧ ವಂದಿತನಾಗಿ ಲೋಕ ಸಂಮಾನ್ಯನಾಗಿ
ಶ್ರೀ ವಿವೇಕಾನಂದನೆಸೆದನಂದು.